

## ಜಿಲ್ಲೆಗೊಂದು ‘ರೆಸ್ಕ್ಯೂ ಟೀಮ್’ ಬೇಕು..

**★ ಶವ ತೆಗೆಯೋದಕ್ಕೆ ಜೀವದ ಹಂಗು ತೊರೆದು, ಜೋಗದಗುಂಡಿಗೆ ಇಳಿಯುತ್ತೀರಿ, ನಿಮಗೆ ‘ಸಾವಿನ ಭಯ’ವೇ ಇಲ್ಲವಾ ?**

‘ಆ ಶವ ನಮ್ಮನೆಯವರದ್ದೇ ಆಗಿದ್ದರೆ ?’ – ಹೀಗೆ ಯೋಚನೆ ಮಾಡಿ, ರಕ್ಷಣಾ ಕಾರ್ಯಕ್ಕೆ ಇಳಿಯುತ್ತೇನೆ. ನಾನು 14 ಬಾರಿ ಜೋಗದ ಗುಂಡಿಗೆ ಇಳಿದು ಯಶಸ್ವಿಯಾಗಿ ಹೊರ ಬಂದಿದ್ದೇನೆ. 10 ಶವಗಳನ್ನು ಮೇಲೆ ತಂದಿದ್ದೇನೆ. ನನಗೆ ಜನರ ಹಾರೈಕೆ ಇದೆ. ಜೀವದ ಭಯ ಇಲ್ಲ.

**★ ನೀವು ಸುರಕ್ಷತಾ ಪರಿಕರಗಳನ್ನು ಏಕೆ ಬಳಸುವುದಿಲ್ಲ?**

ಸರಿಯಾದ ಪರಿಕರಗಳನ್ನು ಕೊಟ್ಟರೆ ಬಳಸುತ್ತೇನೆ. ಯಾರಿಗೇ ಆಗಲಿ, ಅಪಾಯದ ಜಾಗಕ್ಕೆ ಇಳಿಯಬೇಕಾದರೆ, ಸುರಕ್ಷತೆ ಬೇಕು ಅನ್ನಿಸಲ್ಲವಾ? ಸೌಲಭ್ಯ ಕೊಡದೇ ಸುರಕ್ಷಾ ಪರಿಕರ ಬಳಸಿ ಎಂದರೆ ಹೇಗೆ?

ಇನ್ನು, ಅಂಥ ಪರಿಕರಗಳನ್ನು ನಾವೇ ಖರೀದಿಸೋಣ ಅಂದ್ರೆ, ನನ್ನ ಬಳಿ ಅಷ್ಟು ಹಣವಿಲ್ಲ. ಜನ ಕೊಡುವ ಹಣ ನನ್ನ ಜೀವನ ಮತ್ತು ಮಕ್ಕಳ ತರಬೇತಿಗಾಗಿ ಬಳಕೆಯಾಗುತ್ತದೆ. ಇತ್ತೀಚೆಗೆ ಕಾರ್ಯಕ್ರಮಕ್ಕೆ ಹೋಗಿದ್ದಾಗ, ಚಲನಚಿತ್ರ ನಿರ್ಮಾಪಕ ರಾಕ್ ಲೈನ್ ವೆಂಕಟೇಶ್ ಅವರು ಪರಿಕರಗಳ ಖರೀದಿಗೆ ನೆರವಾಗುವ ಭರವಸೆ ನೀಡಿದ್ದಾರೆ.

**★ ಮೊನ್ನೆ ಜೋಗದ ಗುಂಡಿಯಲ್ಲಿ ಹೇಗೆ ನಾಪತ್ತೆಯಾದಿರಿ?**

ಜಲಪಾತದ ಪಕ್ಕದಲ್ಲಿರುವ 20 ಅಡಿ ಆಳದ ಗುಂಡಿಗೆ ಬಿದ್ದಿದ್ದರಿಂದ, ನಾಪತ್ತೆಯಾದೆ ಎಂದು ಮೇಲಿದ್ದವರಿಗೆ ಎನ್ನಿಸಿತು. ನಾನು ಬಿದ್ದಿದ್ದ ಜಾಗ ಮೇಲಿನವರಿಗೂ ಕಾಣುತ್ತಿರಲಿಲ್ಲ, ನನ್ನನ್ನು ಹುಡುಕಲು ಬಂದವರಿಗೂ ಕಾಣಿಸುತ್ತಿರಲಿಲ್ಲ. ಮೇಲಿಂದ ಬೆಳಕು ಹಾಯಿಸುತ್ತಿದ್ದರೂ, ನನ್ನ ಎದುರಿಗಿದ್ದ ಬಂಡೆ ಮರೆಯಾಗಿಸುತ್ತಿತ್ತು. ಇಡೀ ರಾತ್ರಿ ಕೊರೆವ ಚಳಿಯಲ್ಲಿ, ಪುಟ್ಟ ಬಂಡೆ ತುಂಡಿನ ಮೇಲೆ ಒಂಟಿಕಾಲಿನಲ್ಲಿ ನಿಂತು ಸಮಯ ಕಳೆದಿದ್ದು, ಭಯ ಪಡದವನಿಗೂ ಭಯ ಹುಟ್ಟಿಸುವಂತಿತ್ತು. ಆದರೆ, ನನಗೆ ವಾಪಸ್ ಬಂದೇ ಬರುತ್ತೇನೆಂಬ ವಿಶ್ವಾಸ ಇತ್ತು. ಕೊನೆಗೆ ನಮ್ಮ ಹಿರಿಯ ಸ್ನೇಹಿತರು ಬಂದು ನನ್ನನ್ನು ಕರೆದುಕೊಂಡು ಮೇಲೆ ಬಂದರು.

**★ ಪ್ರತಿ ಸಾರಿ ನೀವೇ ಯಾಕೆ ಇಂಥ ಕಷ್ಟದ ರಕ್ಷಣಾ ಕೆಲಸಕ್ಕೆ ಹೋಗ್ತೀರಿ ?**

ಸರ್ಕಾರ ಜಿಲ್ಲೆಗೊಂದು ವಿಶೇಷ ‘ರಕ್ಷಣಾ ತಂಡ’ವನ್ನು (ರೆಸ್ಕ್ಯೂ ಟೀಮ್) ಸರ್ಕಾರ ಮಾಡಿದರೆ, ನನ್ನಂಥವರು ದೂರದ ಜೋಗಕ್ಕೆ ಹೋಗುವುದು ತಪ್ಪುತ್ತದೆ! ಹೌದು, ಅನಿವಾರ್ಯ ಸಂದರ್ಭದಲ್ಲಿ ಕರೆದಾಗ, ಹೋಗಲ್ಲ ಎನ್ನುವುದು ಹೇಗೆ? ರಕ್ಷಣಾ ತಂಡಕ್ಕೆ ನಮ್ಮಂಥವರನ್ನು ಸೇರಿಸಿಕೊಳ್ಳಬಹುದು. ಅವರಿಗೆ ಆಧುನಿಕ ಪರಿಕರ ನೀಡಿ, ತರಬೇತಿ ಕೊಟ್ಟರೆ, ಇಂಥ ಸಂದರ್ಭಗಳಲ್ಲಿ ಅನುಕೂಲವಾಗುತ್ತದೆ. ಕನಿಷ್ಠ ಜಿಲ್ಲೆಗಾಗದಿದ್ದರೂ ವಿಭಾಗಕ್ಕೊಂದಾದರೂ ಇಂಥ ಒಂದು ತಂಡದ ಅಗತ್ಯವಿದೆ. ಈ ತಂಡಕ್ಕೆ ಸಂಬಳ ಕೊಡುವುದು ಬೇಡ. ಕನಿಷ್ಠ ಸಂಭಾವನೆ ಕೊಟ್ಟರೂ ಸಾಕು. ಸ್ಥಳೀಯ ಅಗ್ನಿಶಾಮಕದಳದೊಂದಿಗೆ ಸೇರಿ ರಕ್ಷಣಾ ಕಾರ್ಯದಲ್ಲಿ ನೆರವಾಗುತ್ತಾರೆ.

ಬಹಳಷ್ಟು ಮಂದಿ ‘ನಾನು ಪ್ರಚಾರಕ್ಕಾಗಿ ಹೀಗೆ ಮಾಡ್ತೀನಿ’ ಎಂದು ಮಾತನಾಡಿ ಕೊಳ್ಳುತ್ತಾರಂತೆ. ನನಗೇಕೆ ಪ್ರಚಾರ? ಮಾಧ್ಯಮಗಳು ಈಗಾಗಲೇ ಸಾಕಷ್ಟು ಪ್ರಚಾರ ಕೊಟ್ಟಿವೆ. ಸಾವಿನ ಮನೆಗೆ ಹೋಗಿ ಪ್ರಚಾರ ತೆಗೆದುಕೊಳ್ಳಲು ಯಾರು ಇಷ್ಟ ಪಡುತ್ತಾರೆ ಹೇಳಿ? ಅನಿವಾರ್ಯ ಸಂದರ್ಭದಲ್ಲಿ ನೆರವಾಗ ಬೇಕೆನ್ನುವುದು ನನ್ನ ಉದ್ದೇಶ. ಈ ಜೋಗದ ಗುಂಡಿಗೆ ಇಳಿಯುವುದು ಇಂಥ ಸಂದರ್ಭದಲ್ಲೇ.

**★ ಮುಂದೆ ನಿಮ್ಮ ‘ರಾಕ್ ಕ್ಲೈಂಬ್’ ಯೋಜನೆ?**

ಹುಡುಗರನ್ನು ‘ಗೋಡೆ ಏರುವ ಸ್ಪರ್ಧೆ’ಗೆ ತಯಾರು ಮಾಡುತ್ತಿದ್ದೇನೆ. 15 ಮಕ್ಕಳು ತರಬೇತಿಯಲ್ಲಿದ್ದಾರೆ. 2020ಕ್ಕೆ ಒಲಿಂಪಿಂಕ್ ಸ್ಪರ್ಧೆಗೆ ತಯಾರು ಮಾಡುತ್ತಿದ್ದೇನೆ. ಒಲಿಂಪಿಕ್ಸ್ ಪದಕ ಗೆಲ್ಲುವ ಕನಸು ನನ್ನದು. ಗೆಳೆಯರ ನೆರವಿನಿಂದ ಕೃತಕ ಗೋಡೆ ಮಾಡಿಕೊಂಡಿದ್ದೇನೆ. ಪ್ರವಾಸಿಗರ ಹಣದಿಂದ, ಮಕ್ಕಳಿಗೆ ಒಂದಷ್ಟು ಪರಿಕರಗಳನ್ನು ಖರೀದಿಸಿದ್ದೇನೆ. ಇನ್ನೂ ಅಗತ್ಯವಿದೆ. ಸರ್ಕಾರ ಸಹಾಯ ಮಾಡಬೇಕು. ನಾನು ಮನವಿ ಮಾಡಿದ್ದೇನೆ.

ನೀಡಿದರು. ಅದರಲ್ಲಿ ಉಳಿದಿದ್ದರಲ್ಲಿ ವಿದ್ಯಾರ್ಥಿಗಳಿಗೆ ಸುರಕ್ಷಾ ಪರಿಕರಗಳನ್ನು ಜ್ಯೋತಿರಾಜ್ ಖರೀದಿಸಿದ್ದಾರೆ. ‘ಮಕ್ಕಳಿಗೆ ನನ್ನ ಹಾಗೆ ಬಂಡೆ ಏರುವುದನ್ನು ಕಲಿಸುತ್ತಿಲ್ಲ. ಕ್ರೀಡಾಕ್ಷೇತ್ರಗಳ ನಿಯಮಗಳಿಗೆ ಅನುಸಾರವಾಗಿ ಸುರಕ್ಷಾ ಪರಿಕರಗಳೊಂದಿಗೆ ಅಭ್ಯಾಸ ಮಾಡಿಸುತ್ತಿದ್ದೇನೆ’ ಎಂದು ಅವರು ವಿವರಿಸುತ್ತಾರೆ.

ಬೆಂಗಳೂರಿನ ಪ್ರವೀಣ್ ಎಂಬುವವರು ‘ಕೃತಕ ಗೋಡೆ’ ನಿರ್ಮಾಣಕ್ಕೆ ನೆರವು ನೀಡಿದ್ದಾರೆ. ಇವರು ಬಾಡಿಗೆಯಲ್ಲಿರುವ ಮನೆಯ ಮಾಲೀಕರೇ, ಎದುರಿಗಿನ ಖಾಲಿ ನಿವೇಶನವನ್ನು, ‘ಗೋಡೆ ಏರುವ ತರಬೇತಿ’ಗೆ ಬಿಟ್ಟುಕೊಟ್ಟಿದ್ದಾರೆ. ‘ಸಾರ್ವಜನಿಕರು, ಮಾಧ್ಯಮದವರು, ಮನೆ ಮಾಲೀಕರಂಥವರು ಕೊಟ್ಟ ನೆರವನ್ನು ನಮ್ಮ ಸರ್ಕಾರಗಳು ನೀಡಿದ್ದರೆ, ಇಷ್ಟು ಹೊತ್ತಿಗೆ, ನಮ್ಮ ಹುಡುಗರು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದರು’ ಎಂದು ಜ್ಯೋತಿರಾಜ್ ಹೇಳುತ್ತಾರೆ.

### ನಟನೆ- ಪ್ರಶಸ್ತಿಗಳ ನಂಟು

ಹಂತ ಹಂತವಾಗಿ ಈತನ ಸಾಹಸ ಚಟುವಟಿಕೆಗಳು ಪ್ರವಾಸಿಗರ ಗಮನ ಸೆಳೆದು ಮಾಧ್ಯಮಗಳಲ್ಲೂ ಬೆಳಕಿಗೆ ಬಂದ ಮೇಲೆ, ಜ್ಯೋತಿರಾಜನನ್ನು ಚಲನಚಿತ್ರ ರಂಗವೂ ಕೈಬೀಸಿ ಕರೆಯಿತು. ಸಿನಿಮಾ ನಿರ್ದೇಶಕ ರಮೇಶ್, ನಟ ಕಿಶೋರ್ ನಾಯಕನಾಗಿರುವ ‘ವೀರಪ್ಪನ್’ ಚಿತ್ರದಲ್ಲಿ ಚಿಕ್ಕದೊಂದು ಪಾತ್ರ ನೀಡಿದ್ದರು. ಇದಾದ ನಂತರ ಕೋತಿರಾಜನ ಜನಪ್ರಿಯತೆಯನ್ನೇ ಆಧಾರವಾಗಿಟ್ಟುಕೊಂಡು 2014ರಲ್ಲಿ ‘ಕೋತಿ ಅಲಿಯಾಸ್ ಜ್ಯೋತಿರಾಜ್’ ಎಂಬ ಸಿನಿಮಾ ಬಿಡುಗಡೆಯಾಯಿತು. ಆದರೆ, ಈ ಸಿನಿಮಾ ಆತನ ನಿಜಜೀವನದ ‘ಸಾಹಸ’ ನೀಡಿದಷ್ಟು ರೋಚಕತೆ, ರಂಜನೆ ನೀಡಲಿಲ್ಲ.

ದಶಕ ಕಳೆಯುವುದರೊಳಗೆ ಕೋತಿರಾಜ ಕೋಟೆನಾಡಿನ ಮಗನಾದರು. ಮಾತ್ರವಲ್ಲ ‘ಸೆಲೆಬ್ರೆಟಿ ರಾಕ್ ಕ್ಲೈಂಬರ್’ ಆಗಿ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದರು. ರಾಜ್ಯದ ನಾನಾ ಕಡೆ ಪ್ರಶಸ್ತಿ, ಪುರಸ್ಕಾರಗಳು ಅರಸಿ ಬಂದವು. ಇತ್ತೀಚೆಗೆ ಜನರಲ್ ತಿಮ್ಮಯ್ಯ ಸಾಹಸ ಅಕಾಡೆಮಿಯವರು ಬೆಂಗಳೂರಿನಲ್ಲಿ ಆಯೋಜಿಸಿದ್ದ ‘23ನೇ ಸೌತ್ ಝೋನ್ ಸ್ಪೋರ್ಟ್ ಕ್ಲೈಂಬಿಂಗ್ ಚಾಂಪಿನ್ ಷಿಪ್ 2017’ರಲ್ಲಿ ಮೊದಲ ಬಹುಮಾನ ಪಡೆದಿದ್ದಾರೆ. ಆರಂಭದಿಂದ ಈತನ ಬೆಳವಣಿಗೆಗೆ ಬೆನ್ನೆಲುಬಾಗಿರುವ ಮುರುಘಾ ಮಠದ ಶಿವಮೂರ್ತಿ ಶರಣರು, ‘ಭರಮಣ್ಣ ನಾಯಕ ಶೌರ್ಯ ಪ್ರಶಸ್ತಿ’ ನೀಡಿ ಗೌರವಿಸಿದ್ದಾರೆ. ಮಾತ್ರವಲ್ಲ, ಈತ ಆರಂಭಿಸಿರುವ ಸಾಹಸ ತರಬೇತಿ ಸಂಸ್ಥೆ ಬೆಳವಣಿಗೆಗೂ ಸಹಕರಿಸಿದ್ದಾರೆ.

ಹೀಗೆ ದಿಕ್ಕುತಪ್ಪಿ ಕೋಟೆನಾಡಿಗೆ ಬಂದು, ಭವಿಷ್ಯ ಗೊತ್ತಿಲ್ಲದೇ, ಬದುಕು ಕಟ್ಟಿಕೊಳ್ಳಲು ಶುರುಮಾಡಿದ ಜ್ಯೋತಿರಾಜ್, ಈಗ ಈ ನೆಲದವರೇ ಆಗಿದ್ದಾರೆ. ಇತ್ತೀಚೆಗೆ ಜೋಗದ ಗುಂಡಿಯಲ್ಲಿಳಿದು ನಾಪತ್ತೆಯಾಗಿದ್ದಾನೆಂಬ ಸುದ್ದಿ ಕೇಳಿದಾಗ, ಮನೆಯ ಮಾಲೀಕರು ಸೇರಿದಂತೆ ಅನೇಕರು ಆತಂಕ ವ್ಯಕ್ತಪಡಿಸಿದ್ದು, ಅವರು ಸ್ಥಳೀಯರೊಂದಿಗೆ ಬೆಸೆದುಕೊಂಡಿರುವ ಬಾಂಧವ್ಯಕ್ಕೆ ಸಾಕ್ಷಿ. ಇದೇ ನಂಟು ಈಗ ‘ಸಾಂಸಾರಿಕ ನಂಟ’ನೊಂದಿಗೆ ಮುಂದುವರಿದಿದೆ. ಇವರನ್ನು ಸಣ್ಣ ವಯಸ್ಸಿನಿಂದಲೂ ನೋಡಿರುವ ಜಿ.ಆರ್. ಹಳ್ಳಿಯ ಶ್ರೀನಿವಾಸ್ ಕುಟುಂಬ ಮಗಳನ್ನು ಕೊಟ್ಟು ಮದುವೆ ಮಾಡುವ ಸಿದ್ದತೆಯಲ್ಲಿದೆಯಂತೆ. ಜತೆಗೆ ‘ಮದುವೆಯ ನಂತರ ಇಂಥ ಸಾಹಸ ಬೇಡ’ ಎಂಬ ‘ಪ್ರೀತಿಯ ಷರತ್ತ’ನ್ನೂ ಅವರು ವಿಧಿಸಿದ್ದಾರಂತೆ..!